# ಗಂಗಾಧರ ಕೊಳಗಿ

ಕಲೆ: ವೆಂಕಟ್ರಮಣ ಭಟ್

ಪಾರದರ್ಶಕ ಗಾಜಿನ ಗೋಡೆಗಳ ಮೂರಂತಸ್ತಿನ ಆ ಕಟ್ಟಡದ ಎದುರು ನಿಂತ ಸುಲೇಖ ಬೆರಗಾಗಿಬಿಟ್ಟ. ಇಂಥ ಕಟ್ಟಡಗಳು ಅವನಿಗೆ ಹೊಸತೇನಲ್ಲ. ಬದುಕುತ್ತಿರುವ ಬೆಂಗಳೂರಿನಲ್ಲಿ, ಆಗಾಗ್ಗೆ ಕೆಲಸದ ಸಲುವಾಗಿ ಹೋಗುತ್ತಿದ್ದ ವಿದೇಶಗಳಲ್ಲಿ ಇಂಥವನ್ನು ಅದೆಷ್ಟು ಕಂಡಿದ್ದಾನೋ? ತಾನು ಚಿಕ್ಕವನಿದ್ದಾಗ ದೊಡ್ಡ ಊರಿನಂತಿದ್ದ ಪೇಟೆ ನಿಧಾನಕ್ಕೆ ವಿಸ್ತರಿಸುತ್ತಿರುವುದನ್ನು ಸುಲೇಖ ಕಾಣುತ್ತಲೇ ಬಂದಿದ್ದ. ಅತ್ತ ನಗರವೂ ಅಲ್ಲದ, ಇತ್ತ ಸಣ್ಣ ಪೇಟೆಯೂ ಅಲ್ಲದ, ಆಧುನಿಕತೆ, ಸಂಪ್ರದಾಯ ಎಲ್ಲವನ್ನೂ ಒಟ್ಟಾಗಿಯೇ ಕಟ್ಟಿಕೊಂಡಿದ್ದ ಊರಿನಲ್ಲಿ ಇಂಥದೊಂದು ಕಟ್ಟಡ ಇರಬಹುದು ಎನ್ನುವುದೇ ಸುಮಾರು ಹತ್ತು ವರ್ಷಗಳ ನಂತರ ಊರಿಗೆ ಬಂದಿರುವ ಅವನಿಗೆ ಆಶ್ಚರ್ಯ ತಂದಿತ್ತು. ತಾನು ಸಾಗಿದ ಜಗತ್ತು ತನ್ನ ತರಹವೇ ಬೆಳೆದುಕೊಳ್ಳುತ್ತ ಹೋಗಿದೆ, ಹಿಂದಿನದು ಇನ್ನೂ ಇದ್ದಲ್ಲೇ ಇದೆ ಎನ್ನುವ ಕಲ್ಪನೆಯಲ್ಲಿದ್ದ ಅವನಿಗೆ ಸಣ್ಣಗೆ ಬಿಸಿ ಮೂಡಿದಂತೆ ಆಯ್ತು.

ಸುಲೇಖ ಚಿಕ್ಕವನಿದ್ದಾಗ ಅವನ ವಾರಿಗೆಯವರಿಗೆ ತಾಲ್ಲೂಕು ಕೇಂದ್ರವಾದ ಈ ಊರು ದೊಡ್ಡ ನಗರದಂತೆ ಕಾಣುತ್ತಿತ್ತು. ಹತ್ತಿಪ್ಪತ್ತು ಮೈಲಿ ದೂರದ ಕಾಡು, ಹೊಳೆಗಳ ನಡುವಿನ ಸಣ್ಣ ಊರಿನಲ್ಲಿ ಹುಟ್ಟಿ, ಅಲ್ಲಿನ ನಾಲ್ಕಾರು ಮೈಲಿ ದೂರದ ಶಾಲೆಯಲ್ಲಿ ಓದುತ್ತ ಬೆಳೆದುಬಂದ ಸುಲೇಖ ವರ್ಷದಲ್ಲಿ ಎರಡು ಬಾರಿ ಹೆಚ್ಚೆಂದರೆ ಮೂರು ಬಾರಿ ಈ ಪೇಟೆಗೆ ಬರುವ ಅದೃಷ್ಟ ಪಡೆದಿದ್ದ. ಊರ ಹಂಚು, ನಡು ನಡುವೆ ಮಂಗಳೂರು ಹಂಚಿನ ಇಳಿಜಾರಾದ ಮಾಡಿನ ಮನೆಗಳು, ಕೊಂಕಣಿಗರ ಹತ್ತಾರು ದಿನಸಿ ಅಂಗಡಿಗಳು, ಸಿಂಪಿಗರ ನಾಲ್ಕಾರು ಬಟ್ಟೆ ಅಂಗಡಿಗಳು, ಗೂರಪ್ಪ ಶೆಟ್ಟರ ಮತ್ತು ಗೂರ್ಖಾರ ಸಾಹೇಬರ ಎರಡೇ ಪಾತ್ರೆ ಅಂಗಡಿಗಳು. ನಾಲ್ಕಾರು ಮಾರಗಲದ ಬಸ್ ಸ್ಟ್ಯಾಂಡಿಗೆ ತಾಸಿಗೊಮ್ಮೆ ಬರುವ ಬಸ್ಸುಗಳು, ಕೃಷ್ಣ ಡಾಕ್ಟರು, ಶೆಟ್ಟಿ ಡಾಕ್ಟರು ಬಿಟ್ಟರೆ ಸಣ್ಣ ಇಮಾರತಿನಲ್ಲಿದ್ದ ಸರಕಾರಿ ಆಸ್ಪತ್ರೆಯ ಡಾಕ್ಟರು, ಅದು ಬಿಟ್ಟರೆ ಹಾಳತಕಟ್ಟಾದಲ್ಲಿದ್ದ ಚಂದ್ರಶೇಖರ ಪಂಡಿತರು ಕಾಯಿಲೆ ಬಿದ್ದವರಿಗೆ ಧನ್ವಂತರಿಗಳು. ಭಂಡಾರಕರ ಹೋಟೆಲ್ ಚಹಾ ತಿಂಡಿಗೆ ಆಸರೆಯಾದರೆ, ಪುರುಷೋತ್ತಮ ಭಟ್ಟರ ಖಾನಾವಳಿ ಊಟಕ್ಕೆ. ಶೀಗೆಹಳ್ಳಿ ವಖಾರಿ, ದೇವನಳ್ಳಿ ವಖಾರಿ, ಸುಬ್ರಾಯ ಹೆಗಡೆಯವರ ವಖಾರಿ ಎನ್ನುವ ಅಡಿಕೆ ವ್ಯಾಪಾರಸ್ಥರಿಗೆ ಮಾರಲೆಂದು ಬೆಳೆದ ಅಡಿಕೆಯನ್ನು ಹೇರಿಕೊಂಡು ಬರುವ ಚಕ್ಕಡಿ ಗಾಡಿಯಲ್ಲಿ ಹಟ ಹಿಡಿದು ಹತ್ತಿ ಬರುತ್ತಿದ್ದ ಸುಲೇಖ ಇಲ್ಲಿನ ನಿರ್ಜನತೆ, ಒಂದು ತೆರನಾದ ಮೌನವನ್ನ ಗ್ರಹಿಸುತ್ತ, ಇದು ತನ್ನ ಹಳ್ಳಿಯಂಥದ್ದೇ ಎಂದುಕೊಳ್ಳುತ್ತಿದ್ದ. ಅಪ್ಪ ಹಸಿವಾದಾಗ ಕೊಡಿಸುತ್ತಿದ್ದ ಪದ್ಮನಾಭ ಭಟ್ಟರ ಖಾನಾವಳಿಯ ಬಿಸಿ ದೋಸೆ, ಸಾಲಿಗ್ರಾಮ ಅಡಿಗರ ಹೊಟೇಲಿನ ಇಡ್ಲಿ ಮೊಸರು, ಶಾಂತಾರಾಮಪ್ಪನವರ ದಿನಸಿ ಅಂಗಡಿಯ ಅರ್ಧಚಂದ್ರಾಕೃತಿಯ ಲಿಂಬು ಪೆಪ್ಪರಮೆಂಟ್ ಇವೆಲ್ಲ ಸುಲೇಖನ ಒಳಮನಸ್ಸಿನಲ್ಲಿ ಸ್ಥಾಯಿಯಾಗಿ ಉಳಿದುಬಿಟ್ಟಿದ್ದವು.

ಹೈಸ್ಕೂಲು ಬಳಿಕ ಕಾಲೇಜು ವಿದ್ಯಾಭ್ಯಾಸವನ್ನು ಕುಮಟಾದಲ್ಲಿ ಮುಗಿಸಿದ ಸುಲೇಖ ಅನಂತರ ಈ ಊರಿಗೆ ಬಂದದ್ದು ಅಪರೂಪವೇ. ಐಟಿ ಎಂಬ ಕುದುರೆಯ ಬೆನ್ನು ಹತ್ತಿ ಹೊರಟ ಸುಲೇಖನಿಗೆ ಹುಟ್ಟಿದ ಊರು ಕೇವಲ ತನ್ನ ಬಾಲ್ಯದ ಜಗತ್ತಾಗಿ ಉಳಿದಿತ್ತು. ಹೊರ ಜಗತ್ತಿನಂತೆಯೇ ಇದು ಕೂಡ ಬದಲಾಗುತ್ತಿದೆ ಎನ್ನುವ ಕಲ್ಪನೆಯೇ ಇರಲಿಲ್ಲ.

ತನಗೆ ಬಡಿದ ಬಿಸಿಲನ್ನು ಮತ್ತಷ್ಟು ಪ್ರಖರವಾಗಿ ರಾಚುತ್ತಿದ್ದ ಆ ಗಾಜಿನ ಗೋಡೆಯ ಬುಡದಲ್ಲಿ ಒಂದೆಡೆ ಬಿಲದಂತೆ ಇದ್ದ, ಮೇಲ್ಗಡೆ ಡೋರ್ ಎಂದು ಇಂಗ್ಲಿಷ್‌ನಲ್ಲಿ ಸಣ್ಣಕ್ಷರದಲ್ಲಿ ಬರೆದಿದ್ದ ಗಾಜಿನ